


### ಬೆಳಕು ಚೆಲ್ಲಿದೆ

'ಚಿನ್ನ ಕರಗುವ ಸಮಯ' (ಸುಧಾ, ಜೂನ್ 18) ಸುಧಾ ಹೆಗಡೆ ಅವರ ಮುಖಪುಟ ಲೇಖನ ದೇಶವನ್ನು ಸಾಂಪ್ರದಾಯಿಕವಾಗಿ ಕಾಡುತ್ತಿರುವ ನಮ್ಮ ಬಂಗಾರದ ಮೋಹ ಮತ್ತು ಲೋಭದ ಬಗ್ಗೆ ಸಮಯೋಚಿತ ಬೆಳಕು ಚೆಲ್ಲಿದೆ.

– ನಾಗೇಶ್ ಕುಮಾರ್ ಸಿ.ಎಸ್. ಚೆನ್ನೈ, ಪಿ. ಗೋವಿಂದರಾಜು, ಶಿವಮೊಗ್ಗ, ಎಸ್.ವಿ. ಶಿವಕುಮಾರ್, ಬೆಂಗಳೂರು, ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ, ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ, ಎಸ್.ಎನ್. ಬೀಡಕರ, ಕಲಬುರಗಿ, ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಚಿನ್ನ ಕರಗದು!

ಭಾರತೀಯರು ಮುಖ್ಯವಾಗಿ ಮಹಿಳೆಯರು ಆದಷ್ಟು ಮಟ್ಟಿಗೆ ಚಿನ್ನ ಧರಿಸಿ, ಲಾಕರ್‌ನಲ್ಲಿ ಇರಿಸಿ ಆನಂದಿಸಲು ಬಯಸುತ್ತಾರೆಯೇ ಹೊರತು, ಬಾಂಡ್ ರೂಪದಲ್ಲಿ ಇಡಲು ಬಯಸುವುದಿಲ್ಲ. ಏಕೆಂದರೆ ಬಾಂಡ್‌ಗಳು ಚಿನ್ನದಂತೆ ಹೊಳೆಯುವುದಿಲ್ಲ ಹಾಗೂ ಅವನ್ನು ಧರಿಸಲು ಬರುವುದಿಲ್ಲ!

–ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ

### ವಿಚಾರ ಲಹರಿ

ವಿಚಾರ ಲಹರಿಯಲ್ಲಿ ತೋಷ ಅವರು, ಕಾಲಾಂತರದಲ್ಲಿ ಪ್ರಜ್ಞೆಯ ವಿಕಸನ ಯಾವ ರೀತಿಯಲ್ಲಿ ಮಾರ್ಪಾಡುತ್ತಾ ಹೋಯಿತು ಎಂಬುದನ್ನು ರಾಮ–ಕೃಷ್ಣಾವತಾರಗಳ ಚಿತ್ರಣದ ಮೂಲಕ ಕಟ್ಟಿಕೊಟ್ಟಿದ್ದಾರೆ.

–ಶಂಕರೇಗೌಡ, ತುಂಬಕೆರೆ

### ಗೊಂದಲ

ವಿಚಾರ ಲಹರಿ ಕೊನೆಯಲ್ಲಿ ಪ್ರಸ್ತಾಪಿಸಿದ ಐತಿಹಾಸಿಕ ಬುದ್ಧ ಯಾವಾಗ ಪುರಾಣ ಕಥೆಯಲ್ಲಿ ಸೇರ್ಪಡೆಗೊಂಡ? ಕಲ್ಕ್ಯಾವತಾರದ ಪ್ರಜ್ಞೆ ತೋಷ ಅವರಿಗೇಕೆ ಬಂದಿಲ್ಲ? ಯಾವ ಪುರಾಣ ಗ್ರಂಥದಲ್ಲಿ ಈ ಕೊನೆಯ ಎರಡು ಅವತಾರದ ಕಥೆ ದಾಖಲಾಗಿದೆ? ತೋಷ ಅವರು ಗೊಂದಲ ಪರಿಹರಿಸಲಿ.

–ಕೆ. ಭಾಸ್ಕರ ಮಕ್ಕಿತ್ತಾಯ, ಮಧುಗಿರಿ

### ಅರ್ಥಪೂರ್ಣ

'ನಿಮ್ಮೊಡನೆ'ಯಲ್ಲಿ 'ಗ್ರಾಮ ಪಂಚಾಯಿತಿ ಸವಾಲುಗಳು' (ರಘುನಾಥ ಚ.ಹ.) ಕುರಿತ ಬರಹ ಅರ್ಥಪೂರ್ಣ.

–ಎಂ.ಜಿ. ರಾಮಚಂದ್ರ, ಮಂಡಗಳಲೆ, ಮಹಾವೀರ ಕಾಸರ, ಶಿವಮೊಗ್ಗ

### ಸಕಾಲಿಕ

'ನೀವು ರಕ್ತದಾನ ಮಾಡಿದ್ದೀರಾ?' ಡಾ. ಗುರುಲಿಂಗಪ್ಪ ಅಂಕದ ಅವರ ಆರೋಗ್ಯ ಲೇಖನ ಸಕಾಲಿಕ.

–ಹೇಮಲತಾ ಸುಬ್ರಹ್ಮಣ್ಯ, ಹಾಲ್ಮುತ್ತೂರು, ವೈ.ಜಿ. ನರಸಿಂಹನ್, ಶಿವಮೊಗ್ಗ

### ಗಮನ ಸೆಳೆಯಿತು

ಆರೋಗ್ಯ ಲೇಖನ ಗಮನಸೆಳೆಯಿತು. ಅಪರೂಪದ 'ಎ ನೆಗೆಟಿವ್' ರಕ್ತದ ಗುಂಪಿನವಳಾದ ನಾನು ಹಲವಾರು ಬಾರಿ ರಕ್ತದಾನ ಮಾಡಿದ್ದೇನೆ.

–ಪ್ರಭಾ ಪ್ರಸಾದ್, ಬೆಂಗಳೂರು

### ಉತ್ತಮ ಲೇಖನ

'ಉಪನ್ಯಾಸಗಳಿಂದ ಉಪಯೋಗವೆಷ್ಟು? (ಎ.ಓ. ಆವಲಮೂರ್ತಿ) ಶಿಕ್ಷಣ ಲೇಖನ ಚೆನ್ನಾಗಿದೆ.

–ಎಚ್. ಆನಂದಕುಮಾರ್, ಚಿತ್ರದುರ್ಗ

### ಕಣ್ಮನ ಸೆಳೆದವು

'ಬೇಲಮ್ ಗುಹೆಗಳು' ಲೇಖನ (ಪದ್ಮಾವತಿ ರಾವ್) ಮತ್ತು ಚಿತ್ರಗಳು ಕಣ್ಮನ ಸೆಳೆದವು.

–ರವೀಂದ್ರನಾಥ ಶಿ. ಯಡಹಳ್ಳಿ

### ನೆನಪು ಮರುಕಳಿಸಿತು

ಏಳು ವರ್ಷಗಳ ಹಿಂದೆ ಬಳ್ಳಾರಿಯಿಂದ ಬೇಲಮ್‌ಗೆ ಹೋಗಿ ನೋಡಿ ಬಂದ ನೆನಪು ಹಸಿರಾಗಿರುವಾಗಲೇ 'ಸುಧಾ'ದಲ್ಲಿ ಈ ಲೇಖನ ಓದಿ ಮತ್ತಷ್ಟು ನೆನಪು ಮರುಕಳಿಸಿತು.

–ಶಕುಂತಲಾ ರೆಡ್ಡಿ, ಬಳ್ಳಾರಿ

### ಚಿತ್ತಾಕರ್ಷಕ

ಪ್ರವಾಸ ಲೇಖನ 'ಪಚ್ ಮೋರಿ ಎಂಬ ಪ್ರಿಯದರ್ಶಿನಿ' (ಎನ್.ಎಸ್. ಶಾರದಾ) ಅರಾವಳಿ ಬೆಟ್ಟದ ಕುರಿತಾದ ಲೇಖನ ಜೊತೆಗಿನ ವರ್ಣಪಾರದರ್ಶಿಕೆ ಚಿತ್ತಾಕರ್ಷಕ.

ನೆ.ಲ.ರಾಂ, ಬೆಂಗಳೂರು

### ಮಾರ್ಮಿಕ ಕಥೆ

ರಾಮಚಂದ್ರ ಹಬ್ಬು ಅವರ ಕಥೆ 'ಅನೂಹ್ಯ ಸಂಬಂಧ' ಮಾರ್ಮಿಕವಾಗಿದೆ.

–ರಾಜಶೇಖರ ಹಾದಿಮನಿ, ಧಾರವಾಡ

### ಬೆಳೆಗಾರರ ಕಷ್ಟದ ಚಿತ್ರಣ

'ಅನ್ನದಾತರ ಅನುಲಾಪ' (ಕೃಷ್ಣಿ ಶಿರೂರ) ಲೇಖನ ಮಲೆನಾಡಿನ ಭಾಗದಲ್ಲಿ ರೈತರು ಬೆಳೆಗಾಗಿ ಪಡುವ ಕಷ್ಟದ ಚಿತ್ರಣವನ್ನು ವಿಷದಪಡಿಸಿದೆ.

–ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಮನದಾಳದ ಮಾತು

ಪ್ರತಿಸ್ಪಂದನ (ರಾಗು) ದಲ್ಲಿ ಸುಚಿತ್ರಾ ಅವರ ಮನದಾಳದ ಮಾತು ಓದಿ ಖುಷಿಯಾಯಿತು

–ಸುಂದರ್, ಬೆಂಗಳೂರು

### ಕಪ್ಪು ಟೊಮ್ಯಾಟೊ

ವಂಡರ್‌ಪುಟ (ಅವನೀಶ್) ದಲ್ಲಿ ಕಪ್ಪು ಟೊಮ್ಯಾಟೊ ಬಗ್ಗೆ ಓದಿ, ಚಿತ್ರ ನೋಡಿ ಅಚ್ಚರಿಯಾಯಿತು. ಕಪ್ಪು ಬದನೆ ಕೇಳಿದ್ದೇವೆ, ಟೊಮ್ಯಾಟೊ ಕೇಳಿರಲಿಲ್ಲ. ಈ ತಳಿಯನ್ನು ಆವಿಷ್ಕಾರ ಮಾಡಿದ ಇಂಗ್ಲೆಂಡ್ ಬ್ರೌನ್ ರೇ ಮೆಚ್ಚುಗೆಗೆ ಅರ್ಹರು.

–ಎಸ್. ಪ್ರಭಾ, ಬೆಂಗಳೂರು




ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450